ದಿನಾಂಕಃ **09-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಡಿ ವಕೀಲರಿಂದ,**

1) ನಾನು ಪಿ ಯು ಸಿ ವ್ಯಾಸಂಗ ಮಾಡಿರುತ್ತೇನೆ. ನಾನು ಕೆ ಎಸ್ ಆರ್ ಟಿ ಸಿ ವಿಭಾಗದಲ್ಲಿ ನಿರ್ವಾಹಕರಾಗಿ ಸುಮಾರು 20 ವರ್ಷಗಳ ಕೆಲಸ ಮಾಡಿರುತ್ತೇನೆ. ನಂತರ ಸ್ವಯಂ ನಿವೃತ್ತಿ ಪಡೆದುಕೊಂಡಿರುತ್ತೇನೆ. ನಾನು ಸ್ವಯಂ ನಿವೃತ್ತಿ ಪಡೆದ ನಂತರ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಸ್ಪರ್ದಿಸಿ ಅಧ್ಯಕ್ಷನಾಗಿರುತ್ತೇನೆ. ನನಗೆ 06 ಎಕರೆ ನೀರಾವರಿ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಶುಂಠಿ, ತೆಂಗು ಮತ್ತು ಅಡಿಕೆ ಬೆಳೆಯುತ್ತೇವೆ.

2) ಪ್ರತಿವಾದಿಗಳು ನಮಗೆ ಸಂಬಂಧಿಕರಾಗಿರುವುದಿಲ್ಲ, ಆದರೆ ಒಂದೇ ಜನಾಂಗಕ್ಕೆ ಸೇರಿರುತ್ತೇವೆ. ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ನಾನು ಇದೇ ನ್ಯಾಯಾಲಯದಲ್ಲಿ ಮಹದೇವಮ್ಮ ರವರ ವಿರುದ್ಧ ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಾನು ದೇವಮ್ಮ ರವರ ವಿರುದ್ಧ ಕ್ರಯ ಪತ್ರದ ಆಧಾರದ ಮೇಲೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೊಂದಾಯಿತ ಕ್ರಯದ ಕರಾರು ಪತ್ರದ ಅಡಿಯಲ್ಲಿ ಮತ್ತು ನೊಂದಾಯಿತ ವಲ್ಲದ ಕ್ರಯದ ಕರಾರು ಪತ್ರ ಅಡಿಯಲ್ಲಿ ದಾವೆಗಳನ್ನು ಸಲ್ಲಿಸಿರುತ್ತೇನೆ. ನಾನು ತಮ್ಮಣ್ಣೇಗೌಡ ರವರ ವಿರುದ್ಧ ನೊಂದಾಯಿತವಲ್ಲದ ಕ್ರಯ ಕರಾರು ಪತ್ರದಡಿಯಲ್ಲಿ ದಾವೆ ಸಲ್ಲಿಸಿರುತ್ತೇನೆ.

3) ನಿಪಿ 1 ಛಾಪಾ ಕಾಗದವನ್ನು ಪತ್ರ ಮಾರಾಟಗಾರರ ಬಳಿ ಖರೀದಿ ಮಾಡಿರುತ್ತೇನೆ. ಸದರಿ ಪತ್ರವನ್ನು ಪತ್ರ ಬರೆದವರು ತಂದಿರುತ್ತಾರೆ. ನಾನು ಸಲ್ಲಿಸಿರುವ ಇತರೆ ದಾವೆಗಳಲ್ಲಿ ಹಾಜರುಪಡಿಸಿರುವ ಕರಾರು ಪತ್ರಗಳನ್ನು ನಾಗರಾಜು ರವರೇ ಬರೆದಿರುತ್ತಾರೆ

ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ನಿಪಿ 1 ಕರಾರು ಪತ್ರದಲ್ಲಿ ಚೆಕ್ಕುಬಂದಿ ತಪ್ಪಾಗಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ ಈಗ ಯಾವುದೇ ಬೆಳೆಯನ್ನು ಬೆಳೆದಿರುವುದಿಲ್ಲ. ಕರಾರು ಪತ್ರ ಆಗಿದೆ ಎನ್ನುವ ಕಾಲಕ್ಕೆ ಮಾರುಕಟ್ಟೆ ಮೌಲ್ಯ ಹತ್ತು ಲಕ್ಷಕ್ಕೂ ಮೇಲ್ಪಟ್ಟು ಇತ್ತು ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರವನ್ನು ಪತ್ರ ಬರಹಗಾರರಾದ ನಾಗರಾಜು ರವರು ತಯಾರು ಮಾಡಿರುತ್ತಾರೆ. ಕರಾರು ಪತ್ರದಲ್ಲಿ ಬಾಕಿ ಪ್ರತಿಫಲದ ಬಗ್ಗೆ ನಮೂದು ಮಾಡಿರುವುದಿಲ್ಲ ಕಾರಣ ಪೂರ್ಣ ಕ್ರಯದ ಪ್ರತಿಫಲವನ್ನು ಪಾವತಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

4) ಪ್ರತಿವಾದಿಗಳಿಗೆ ಸಂದಾಯ ಮಾಡಿರುವ ಹಣವು ತೆಂಗಿನ ಕಾಯಿ ಮತ್ತು ಭತ್ತ ವನ್ನು ಮಾರಾಟ ಮಾಡಿದ ಹಣವಾಗಿರುತ್ತದೆ. ನನಗೆ ಆರು ಎಕರೆ ಜಮೀನು ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಸ್ವತ್ತಿನ ಖಾತೆ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ನಿಪಿ 1 ಕರಾರು ಪತ್ರವನ್ನು ಪ್ರತಿವಾದಿಗಳೇ ಹೇಳಿ ಬರೆಸಿರುತ್ತಾರೆ. ನಿಪಿ 1 ಕರಾರು ಪತ್ರವನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ನಾನು ನಿಪಿ 1 ಕರಾರು ಪತ್ರದ ಅಡಿಯಲ್ಲಿ ಯಾವುದೇ ಹಣ ಸಂದಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ನಮೂದು ಮಾಡಿರುವ ಹಣವನ್ನು ಪಾವತಿ ಮಾಡುವ ಸಾಮರ್ಥ್ಯ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪ್ರತ್ಯುತ್ತರ ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-01-2021 ರಂದು ಪ್ರತಿವಾದಿಗಳು ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ.

5) ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರದಡಿಯಲ್ಲಿ ದಾವೆ ಸಲ್ಲಿಸುವ ಅಭ್ಯಾಸವನ್ನು ಬೆಳೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರಕ್ಕೆ ಪ್ರತಿವಾದಿಗಳು ಯಾರೂ ಸಹಿ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರೀ ಸಹಿಗಳನ್ನು ಪ್ರತಿವಾದಿಗಳದ್ದಲ್ಲ ಎಂದರೆ ಸರಿಯಲ್ಲ.

6) ನಿಪಿ 1 ಕರಾರು ಪತ್ರವನ್ನು ಸಂಜೆ 4-30 ರ ಸಮಯದಲ್ಲಿ ಬರೆಯಲಾಗಿದೆ. ನಿಪಿ 1 ಕರಾರು ಪತ್ರಕ್ಕೆ ರಾಮೇಗೌಡ ಮತ್ತು ಮಂಜುನಾಥ್ ರವರು ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರು ನನಗೆ ಆತ್ಮೀಯರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.